ಎಲ್ಲಾ ಕಾರ್ಯಕ್ರಮಗಳನ್ನು ಮಾಡುವಂಥ ಸಂದರ್ಭದಲ್ಲಿ ಶಾಸಕರನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಕಾರ್ಯಕ್ರಮಗಳನ್ನು ತಯಾರು ಮಾಡಬೇಕೆಂದು ಒಂದು ಸೂಚನೆಯನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಚಂದ್ರಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ಅಭಿಪ್ರಾಯ ಸರಿ ಇದೆ. Cabinet Sub Committee ತೀರ್ಮಾನ ಮಾಡಿದ ಮೇಲೆ ಯಾವ ಯಾವ ಹೆಡ್‌ನಲ್ಲಿ ಹೇಗೆ ಖರ್ಚು ಮಾಡಬೇಕು ಎನ್ನುವುದರ ಬಗ್ಗೆ ನಾವು ಒಂದು Planningನ್ನು ಮಾಡುವವರು ಇದ್ದೇವೆ. ಅದನ್ನು ಮಾಡಿದ ಮೇಲೆ ಅದಕ್ಕೆ ಸಂಬಂಧಪಟ್ಟ ಶಾಸಕರ ಜೊತೆ ಕುಳಿತು ಚರ್ಚೆ ಮಾಡಿ ಮಾಡಬೇಕು ಎನ್ನುವುದು ತಾವು ಹೇಳಿರುವ ಅಭಿಪ್ರಾಯ ಕೂಡ ಸರಿಯಾಗಿದೆ. ಆ ಬಗ್ಗೆ ಸೂಚನೆಯನ್ನು ನಾನು ಕೂಡಲೇ ಕಳುಹಿಸಿಕೊಡುತ್ತೇನೆ.

ಸಾಗುವಳಿ ಚೀಟಿ ನೀಡುವುದು

227 (1583) ಶ್ರೀ ಧರ್ಮೇಗೌಡ ಎಸ್.ಎಲ್.(ಬೀರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ತಾಲ್ಲೂಕು (ಬೀರೂರು ಮತಕ್ಷೇತ್ರ) ಬಿಳೇಕಲ್ಲಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಪಾಚಮನೆ, ಎರಡಕ್ಕೆ ಮಲ್ಲೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಕಾಮೇನಹಳ್ಳಿ ಗ್ರಾಮದಲ್ಲಿಯ ಗ್ರಾಮಸ್ಥರು ಸರ್ಕಾರಿ ಜಮೀನನ್ನು 40 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವರಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿದೆಯೇ; ನೀಡದಿದ್ದಲ್ಲಿ, ಸಾಗುವಳಿ ಚೀಟಿ ನೀಡಲು ಸರ್ಕಾರದ ವತಿಯಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);

ಇ) ಗ್ರಾಮಗಳಲ್ಲಿ ಸಾಗುವಳಿ ಮಾಡುತ್ತಿರುವವರೆಲ್ಲರೂ ಕಡು ಬಡ ಕುಟುಂಬದವರಿದ್ದು, ಇವರುಗಳು ತಲಾ ಒಂದು ಎಕರೆಯಿಂದ 3 ಎಕರೆಯವರೆಗೆ ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದು, ಹಕ್ಕು ಪತ್ರಕ್ಕಾಗಿ ಹೋರಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು)

ಈ) ಈ ಸಾಗುವಳಿದಾರರನ್ನು ಒಕ್ಕಲೆಬ್ಬಿಸದೇ ಸಾಗುವಳಿದಾರರಿಗೆ ಜಮೀನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು, ಚಿಕ್ಕಮಗಳೂರು ತಾಲ್ಲೂಕು ಬಿಳೇಕಲ್ಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಪಾದಮನೆ, ಎರಡಕ್ಕಿಬೈಲು ಮತ್ತು ಮಲ್ಲೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಮೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 629 ಗ್ರಾಮಸ್ಥರು, ಕಾಮೇನಹಳ್ಳಿ ಕಾವಲು ಗ್ರಾಮದ ಸ.ನಂ–1ರಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 94ಬಿ ಮೇರೆಗೆ ನಮೂನೆ 53ರ ಅರ್ಜಿ ಸಲ್ಲಿಸಿದ್ದಾರೆ.

ಆ) ಗ್ರಾಮಸ್ಥರು ಬಗರ್ ಹುಕುಂ ಸಾಗುವಳಿ ಮಾಡಿರುವ ಕಾಮೇನಹಳ್ಳಿ ಕಾವಲು ಗ್ರಾಮದ ಸ.ನಂ–1ರಲ್ಲಿ 9358.13 ಎಕರೆ ಜಮೀನಿದ್ದು, ಮೀಸಲು ಅರಣ್ಯ ಪ್ರದೇಶವಾಗಿರುತ್ತದೆ. ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಕಲಂ 2 ಮತ್ತು ಭೂ ಕಂದಾಯ ಕಾಯ್ದೆಯ ಕಲಂ 97ಬಿ(3) ರ ಪ್ರಕಾರ ಮೀಸಲು ಅರಣ್ಯ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದನ್ನು ಸಕ್ರಮಗೊಳಿಸಲು ಅವಕಾಶವಿಲ್ಲದ್ದರಿಂದ, ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿಯ ನಿರ್ಣಯದಂತೆ ಗ್ರಾಮಸ್ಥರು ಸಲ್ಲಿಸಿದ್ದ ನಮೂನೆ 53ರ ಅರ್ಜಿಗಳು ವಜಾಗೊಂಡಿರುತ್ತವೆ.

ಇ) ಗ್ರಾಮಸ್ಥರು ಕಾಮೇನಹಳ್ಳಿ ಕಾವಲು ಗ್ರಾಮದ ಸ.ನಂ–1ರಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದನ್ನು ಸಕ್ರಮಗೊಳಿಸಲು ಸಲ್ಲಿಸಿರುವ ನಮೂನೆ 53ರ ಅರ್ಜಿಗಳು ಸಮಿತಿಯ ತೀರ್ಮಾನದಂತೆ ವಜಾಗೊಂಡಿದ್ದು, ಹಕ್ಕುಪತ್ರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಗ್ರಾಮಸ್ಥರು ಬಗರ್ ಹುಕುಂ ಸಾಗುವಳಿ ಮಾಡಿರುವ ಜಮೀನು ಮೀಸಲು ಅರಣ್ಯವಾಗಿರುವುದರಿಂದ ಮಂಜೂರು ಮಾಡಲು ಅವಕಾಶ ವಿರುವುದಿಲ್ಲ.

ಶ್ರೀ ಧರ್ಮೇಗೌಡ ಎಸ್.ಎಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಓದಗಿಸಿದ್ದಾರೆ, ಇದು ಹೇಗೆ ಇದೆ ಎನ್ನುವುದನ್ನು ಕಂದಾಯ ಸಚಿವರು ಗಮನಿಸಬೇಕು, ಇದು ಬಹಳ ಸೂಕ್ಷ್ಮವಾದಂಥ ಹಾಗೂ ಬಹಳ ಮಹತ್ತರವಾದ ವಿಚಾರ. ಈಗಾಗಲೇ 40 ವರ್ಷಗಳಿಂದ ಈ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ದಯವಿಟ್ಟು ನಾನು ಹೇಳುತ್ತೇನೆ, ನಿಮಗೆ ಏನು

ಉತ್ತರವನ್ನು ಒದಗಿಸಿದ್ದಾರೆ, ಈ IAS ಅಧಿಕಾರಿಗಳ ಮಾತನ್ನು ಕೇಳಬೇಡಿ. ಇವರ ಮಾತನ್ನು ಕೇಳಿದರೆ, ಇವರು ಬಾಯಿಯಲ್ಲಿ ಹುಟ್ಟಿ ಬರುತ್ತಾರಲ್ಲಾ, ಅವರು ಉತ್ತರವನ್ನು ಕೊಟ್ಟಂತೆ ಕೊಟ್ಟಿದ್ದಾರೆ. ಈ ಉತ್ತರದಿಂದ ಜನರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ತಮ್ಮ ಮೂಲಕ ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಸುಮಾರು 1200 ಕುಟುಂಬ 40 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಚಿಕ್ಕಮಗಳೂರಿನ ಕಾಮೇನಹಳ್ಳಿ, ಪಾದಮನೆ, ಎರಡಕ್ಕಿಬಯಲು ಹಾಗೂ ತರೀಕೆರೆ ತಾಲ್ಲೂಕಿನ ಮಳಿಗೇನಹಳ್ಳಿ ಅದೇ ತರಹ ಕಡೂರು ತಾಲ್ಲೂಕಿನ ಎಮ್ಮೆದೊಡ್ಡಿಪ್ರಾಂತ್ಯ, ಈ ಭಾಗದಲ್ಲಿ 1200 ಕುಟುಂಬ ವಾಸ ಮಾಡುತ್ತಿದ್ದಾರೆ. ನಾನು ಎಮ್ಮೆದೊಡ್ಡಿಯ ಬಗ್ಗೆ ಕೇಳಿದ್ದೆ ಉತ್ತರದಲ್ಲಿ ಅದನ್ನು ಕೊಟ್ಟಿಲ್ಲ. ಇಲ್ಲಿ ಇರತಕ್ಕಂಥ ಜನರಿಗೆ ಅವರ ಭಾಗದಲ್ಲಿ ಸ್ಕೂಲ್‌ನ್ನು ಕೊಟ್ಟಿರುತ್ತೇವೆ. ರಸ್ತೆ ಮಾಡಿದ್ದೇವೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ, ಎಲ್ಲವನ್ನು ಒದಗಿಸಿ ಕೊಟ್ಟಿದ್ದೇವೆ. ಈಗ ಅವರಿಗೆ ಸಾಗುವಳಿ ಕೊಡಲಿಲ್ಲವೆಂದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೃಂಗೇರಿಯಲ್ಲಿ ಈಗ ಏನು ನಡೆಯುತ್ತಿದೆ, ಮೆಣಸಿನಹಾಡ್ಯದಲ್ಲಿ ಏನು ನಕ್ಸಲೇಟ್ ಗಲಾಟೆ ಎಂದು ಹೇಳುತ್ತಿದ್ದೀರಿ, ನೀವು ಅದೇ ತರಹ ಇನ್ನೊಂದು ಸಮಸ್ಯೆಯನ್ನು ನಾವಾಗಿ ಉದ್ಭವ ಮಾಡಿಕೊಟ್ಟಂತಾಗುತ್ತದೆ. ಇದನ್ನು ಮಾನ್ಯ ಕಂದಾಯ ಸಚಿವರು ಗಮನಿಸಬೇಕಾಗುತ್ತದೆ. ದಯಮಾಡಿ ಈಗಾಗಲೇ ಅಲ್ಲಿರತಕ್ಕಂಥ ಜನರಿಗೆ ಅರ್ಧ ಜನರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಾಗಿದೆ. ಇದು ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೊಟ್ಟಿರತಕ್ಕಂಥ ಉತ್ತರ. ಸ್ವಾಮಿ ಅವರಿಗೆ Practical ಆಗಿ ಅನುಭವ ಇಲ್ಲ. ಆ ಭಾಗದಲ್ಲಿ ನಾನು ಮಂಡಲ ಪ್ರಧಾನವಾಗಿ ಕೆಲಸ ಮಾಡಿ ಈಗ ಶಾಸಕನಾಗಿ ಬಂದು ಹೇಳುತ್ತಿದ್ದೇನೆ. ಸುಮಾರು 40 ವರ್ಷಗಳಿಂದ ಈ ಸಮಸ್ಯೆ ಇದೆ. ಆ ಜನರಿಗೆ ಒಂದು ಎಕರೆಯಿಂದ ಮೂರು ಎಕರೆಯವರೆಗೆ ಸಾಗುವಳಿ ಮಾಡತಕ್ಕಂಥ ಜನ ಅಲ್ಲಿ ವಾಸ ಮಾಡುತ್ತಿದ್ದಾರೆ. ತಾವು ದಯಮಾಡಿ ಸಾಗುವಳಿಯನ್ನು ಕೊಡಲಿಲ್ಲವೆಂದರೆ, ಆ ಜನರಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವ ಒಂದು ವ್ಯವಸ್ಥೆ ಆ ಜನರಲ್ಲಿ ಮೂಡಿ ಬರುತ್ತದೆ. ಅದಕ್ಕೆ ಅವಕಾಶವನ್ನು ಸರ್ಕಾರ ಮಾಡಿಕೊಡಬಾರದೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತಾ, ದಯಮಾಡಿ ಕಂದಾಯ ಸಚಿವರು ಇನ್ನೊಮ್ಮೆ ಆ ಅಧಿಕಾರಿಗಳಿಂದ ಸಮಂಜಸವಾದ Practical ಆಗಿ ನೀವು ಸಂಬಂಧಪಟ್ಟ

ಅಧಿಕಾರಿಗಳನ್ನು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ತರಿಸಬೇಕು. ಇಲ್ಲದೇ ಹೋದರೆ ತುಂಬಾ ಕಷ್ಟವಾಗುತ್ತದೆ ಎನ್ನತಕ್ಕಂಥದ್ದರ ಬಗ್ಗೆ ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮೇಗೌಡರು ಏನೊಂದು ಪ್ರಶ್ನೆಯನ್ನು ಕೇಳಿದ್ದಾರೆ, 629 ಗ್ರಾಮಸ್ಥರು ಕಾಮೇನಹಳ್ಳಿ ಕಾವಲು ಗ್ರಾಮದ ಸರ್ವೆ ನಂಬರ್–1 ರಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮ ಮಾಡಬೇಕೆಂದು ಹೇಳಿ 94ಬಿ ಮತ್ತು 53 ರಲ್ಲಿ ಅವರು ಅರ್ಜಿಯನ್ನು ಕೊಟ್ಟಿದ್ದಾರೆ. ಆದರೆ ಈ ಒಂದು ಸರ್ವೆ ನಂ–1 ಇದು ಮೀಸಲು ಅರಣ್ಯ ಪ್ರದೇಶವಾಗಿರುತ್ತದೆ. ಆದ್ದರಿಂದ ಅವರು ಸಾಗುವಳಿ ಮಾಡುತ್ತಿರುವುದು ನಿಜವಾಗಿದ್ದರೂ ಸಹಿತ ಇವತ್ತು ಅದು ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಈ ಅರಣ್ಯ ಸಂರಕ್ಷಣೆ ಕಾನೂನಿನ ತೊಂದರೆ ಅಲ್ಲಿ ಇದ್ದುದರಿಂದ ಇವತ್ತು ಅದನ್ನು ನಾವು ಮಂಜೂರು ಮಾಡುವುದಕ್ಕೆ ಆಗುತ್ತಿಲ್ಲ. ಆ ಒಂದು ಸಮಸ್ಯೆ ಇದ್ದುದರಿಂದ ಆಗಿದೆ, ಬೇರೆ ಯಾವ ದುರುದ್ದೇಶದಿಂದ ಇವತ್ತು ಕೊಡಬಾರದು ಎಂದು ಅಲ್ಲ. ಆ ಒಂದು ದೃಷ್ಟಿಯಿಂದ ಇದನ್ನು ಕೊಡುವುದಕ್ಕೆ ಆಗುತ್ತಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಇದರ ಬಗ್ಗೆ ಸಭೆಯನ್ನು ಕರೆದಿದ್ದಾರೆ. ಸಾಕಷ್ಟು ಚರ್ಚೆಯೂ ಆಗಿದೆ. ಈ ರೀತಿ ಮೀಸಲು ಅರಣ್ಯ ಪ್ರದೇಶದಲ್ಲಿ ಯಾರು ಇಲ್ಲಿಯವರೆಗೆ ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅದನ್ನು ಯಾವ ರೀತಿ ಸಕ್ರಮಗೊಳಿಸಬೇಕು ಎನ್ನುವುದರ ಬಗ್ಗೆ ಈಗಾಗಲೇ ಒಂದು ಕಮಿಟಿಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಹಿಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂತಹ ಸಮಸ್ಯೆ ಬಂದಾಗ, ಚಿಕ್ಕಮಗಳೂರು ಸಮಸ್ಯೆ ಬಂದಂಥ ಸಂದರ್ಭದಲ್ಲಿ ಆದಾಗ ಇದನ್ನು ಯಾವ ರೀತಿ ಸಕ್ರಮಗೊಳಿಸಬೇಕು ಅಥವಾ ಪರ್ಯಾಯವಾಗಿ ಯಾವ ಲ್ಯಾಂಡ್‌ನ್ನು ಅಲಾಟ್ ಮಾಡಬೇಕು ಎನ್ನುವುದರ ಬಗ್ಗೆ ಸಾಕಷ್ಟು ಚಿಂತನೆಯನ್ನು ಇವತ್ತಿನ ಸರ್ಕಾರ ಮಾಡುತ್ತಿದೆ. ಇದರ ಬಗ್ಗೆ ಮತ್ತೊಂದು ಸಲ ಎಲ್ಲಾ ಪ್ರತಿನಿಧಿಗಳನ್ನು ಕರೆದು ಇದರ ಬಗ್ಗೆ ಹೆಚ್ಚು ಚಿಂತನೆ ಮಾಡಿ ಇದಕ್ಕೆ ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಧರ್ಮೇಗೌಡ ಎಸ್.ಎಲ್ : ಮಾನ್ಯ ಅಧ್ಯಕ್ಷರೆ, ನಾನು ಕೊಟ್ಟಿರುವುದರಲ್ಲಿ ಒಂದನ್ನು ಮರೆತಿದ್ದಾರೆ. ಅದಕ್ಕಾಗಿ ಅದರಲ್ಲಿ ಕಡೂರು

ತಾಲ್ಲೂಕಿನ ಎಮ್ಮೆದೊಡ್ಡಿ ಪ್ರಾಂತ್ಯ. ಅಲ್ಲಿರುವುದು ರೆವಿನ್ಯೂ ಲ್ಯಾಂಡ್, ಅಲ್ಲಿ ಯಾವುದೇ ತಕರಾರು ಇಲ್ಲ. ಅಲ್ಲಿ ಅರ್ಧಂಬರ್ಧ ಸಾಗುವಳಿ ಚೀಟಿಯನ್ನು ಅಲ್ಲಿ ಕೊಟ್ಟು ನಿಲ್ಲಿಸಿದ್ದಾರೆ. ಅದರ ಬಗ್ಗೆಯೂ ಪ್ರಶ್ನೆ ಕೇಳಿದ್ದೆ, ಅದನ್ನು ಕೈಬಿಟ್ಟಿದ್ದಾರೆ. ಅದಕ್ಕಾಗಿ ಸಾಗುವಳಿ ಚೀಟಿ ಕೊಡುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ಅದನ್ನಾದರೂ ಕೊಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಅದರ ಬಗ್ಗೆ ನಾವು ಪರಿಶೀಲನೆ ಮಾಡಿ ಅದನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಅಕ್ರಮ – ಸಕ್ರಮ ಸಮಿತಿ

228 (1428) ಶ್ರಿ ಬಾಲಕೃಷ್ಣ ಹೆಚ್.ಪಿ.(ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಚ್ಚ ನ್ಯಾಯಾಲಯದ ಆದೇಶದಂತೆ ಕಂದಾಯ ಇಲಾಖೆಯು ನಿಬಂಧನೆಗಳನ್ನು ಹಾಕಿರುವುದರಿಂದ ಅಕ್ರಮ–ಸಕ್ರಮ ಜಮೀನು ಮಂಜೂರಾತಿ ಸಮಿತಿಯವರು ತಮ್ಮ ಕಾರ್ಯನಿರ್ವಹಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಕ್ರಮ–ಸಕ್ರಮ ಯೋಜನೆಯಡಿ ಈಗಾಗಲೇ ಮಂಜೂರಾಗಿರುವ ಮತ್ತು ಮಂಜೂರಾಗಬೇಕಾಗಿರುವ ರೈತರ ಜಮೀನುಗಳನ್ನು ಅರಣ್ಯ ಇಲಾಖೆಯವರು ಖಾಲಿ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ವಿವರ ಒದಗಿಸುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಕೆಲವು ಕಡೆ ಆ ಸಮಸ್ಯೆ ಇದೆ.

ಆ) ಮೀಸಲು ಅರಣ್ಯ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಅಂತಹ ಒತ್ತುವರಿಗಳನ್ನು ತೆರವುಗೊಳಿಸಬೇಕಾಗುತ್ತದೆ.

ಇ) ಉದ್ಭವಿಸುವುದಿಲ್ಲ.